ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ದೇವಸ್ಥಾನಗಳಲ್ಲಿ ದೇವದಾಸಿ ಎಂಬ ಅನಿಷ್ಠ ಪದ್ಧತಿಯನ್ನು ತೆಗೆದುಹಾಕುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಪದ್ಧತಿಯನ್ನು ನಿಲ್ಲಿಸುವುದಕ್ಕೆ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಂಡಿದೆ.

ವಿಷಯ :—ಮದ್ಯಸಾರದ ಪರವಾನೆಗಳ ನೀಡಿಕೆ.

ಪ್ರ. ಸಂಖ್ಯೆ 86 (296) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ) ಮಾನ್ಯ ಅಬಕಾರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) 1988ರಿಂದ ಇಂದಿನವರೆಗೆ ಕೆಲವು ಖಾಸಗಿಯವರಿಗೆ ಉತ್ತೇಜನ ಪರವಾನಗಿಗಳನ್ನು ನೀಡಲಾಗಿದೆಯೆ ? ಹಾಗಿದ್ದಲ್ಲಿ ಯಾವ ಉದ್ದೇಶಗಳಿಗಾಗಿ ಪರವಾನಗಿಗಳನ್ನು ನೀಡಲಾಗಿದೆ. ಮತ್ತು ಪರವಾನಗಿಗಳನ್ನು ಯಾರಿಗಾಗಿ ಕೊಡಲಾಗಿದೆಯೇ ಅವರ ಹೆಸರುಗಳನ್ನು ತಿಳಿಸುವುದು;

(ಆ) ಅಂತಹ ಉತ್ತೇಜಕದ ಪರವಾನಗಿಗಳನ್ನು ದುರುಪಯೋಗಪಡಿಸಿಕೊಂಡು ಲಾಭ ಮಾಡುತ್ತಿರುವ ವಿಷಯ ಸರ್ಕಾರಕ್ಕೆ ತಿಳಿದಿದೆಯೆ ;

(ಇ) ಹಾಗಿದ್ದಲ್ಲಿ, ಅಂತಹವರುಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ರಮೇಶ ಜಿಗಜಿಣಗಿ (ಅಬ್ಕಾರಿ ರಾಜ್ಯ ಮಂತ್ರಿಗಳು).—

(ಅ) ಹೌದು, 1983ರಿಂದ ಇಲ್ಲಿಯವರೆಗೆ ಖಾಸಗಿಯವರಿಗೆ ಉತ್ತೇಜಕ ಪರವಾನಗಿಗಳನ್ನು ನೀಡಿರುವುದರ ಉದ್ದೇಶ ಮತ್ತು ಅವರ ಹೆಸರುಗಳನ್ನು ಅನುಬಂಧ 'ಅ' ನಲ್ಲಿ ಕೊಡಲಾಗಿದೆ.

(ಆ) ಇಲ್ಲ.

(ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ANNEXURE A to L.A. No. 296(E)

LIST SHOWING THE SPIRIT LICENCES SANCTIONED TO VARIOUS PERSONS/COMPANIES FOR MANUFACTURE OF CHEMICALS FOR JULY 83 TO DATE JUNE 84.

Sl. No.	Name of Licensee	Purpose for which sanctioned	Remarks
1	2	3	4
1.	M/s. Phosphate Plasticiners (P) Ltd. Bangalore.	Tri Ethyl Phosphate	
2.	M/s. Venus Chemical Ind., Hubli.	Ethyl Acetate	
3.	M/s. Kaveri Chemical Ind., Bangalore.	Ethyl accetate and Acedit Acid	(Closed since July 84)
4.	M/s. Aruna Chemicals, Bangalore.	Ethyl Accetate	
5.	M/s. Basichem Industries, Bidar.	Ethyl Acetate	
6.	M/s. Deccan Organic Chemical Humnabad, Bidar.	Ether Solvent Ethyl Chloride and Chloroform	

1	2	3	4
7.	M/s, CIPLA, Bangalore.	Calcium Seanocides	
8.	M/s. Vasson Chemicals(P) Ltd. Bangalore.	Aminobutanol, Tet Cycline.	(Closed since July 84).
9.	M/s. Mysore Sugar Co., Ltd. Bangalore (Acetic Acid plant) Mandya.	Acetic Acid	
10.	M/s. Imperial Chemical Ind., Bangalore.	Ether solvent	
11.	M/s. Ravi Electricals, Bangalore.	Electric Miniature Bulbs	
12.	M/s. Mysore Acetic and Chemicals Co., Ltd., Mandy.	Di-ethyl Phthalate and Acetic acid.	
13.	M/s. Belur Chemical Ind., Mysore.	Sodium Algenate	(Closed since July 84)
14.	M/s. Gland Chemicals (P) Ltd., Bangalore.	Heparin Sodium	
15.	M/s. Purex Laboratories India (P) Ltd., Bangalore.	Fine Chemical	
16.	M/s. Flavours and Essences (P) Ltd., Mysore.	Spice Olecresed	
17.	M/s. Trisul Chemical, Bangalore.	Ethyl Acerate	
18.	M/s. Triton Chemicals, Mysore.	Enzymes	
19.	M/s. Southfield Paints and Chemical (P) Ltd , B'lore.	Paints and Thinners	
20.	M/s. Atic Chemicals (P) Ltd., Bangalore.		(Closed since July 84).
21.	M/s. Commercial Chemical Ind., Gulbarga.	Ethyl Acetate	
22.	M/s. Sumanth Chemicals, Mandya Taluk.	Ethyl Acrate	
23.	M/s. Dolphin Chemicals, Mysore.	Ethyl Acerate	
24.	M/s. Kanva Industries (P) Ltd., Mysore.	Reproduciable tracing film	(Closed since July 84)

1	2	3	4
25.	M/s. Associated Drug Co., (P) Ltd., Bangalore.	Isopropy plants pyrin	
26.	M/s. Duphex Chemicals, Bangalore.	Dichloro Acetic Acid Trichloro Acetic Acid and Rose crystals	
27.	M/s. South India Organic Chemicals (P) Ltd., Raichur.	Solvent Ether	
28.	Bangalore Chemicals Industries Bangalore.	Ethyl Acetate	
29.	M/s. Mascot Agro Chemicals (P) Ltd., Bangalore.	Weedicides	
30.	M/s. Aldomek Corporation Mysore.	Muskzylol	
31.	M/s. Bhuvaneshwari Chemicals Bangalore.	Ethyl Acetate	
32.	M/s. Lin Chemical Industries (P) Ltd., Mysore.	Ether Solvent and Anesthetmic Eather	
33.	Unilab, Bangalore.	Ether Solvent	
34.	M/s. Kemwell(P) Ltd., Bangalore.	Fine Chemicals	
35.	M/s. Karnataka Salvents. H.O. Kote Taluk.	Di Ethyl Ether solvent	
36.	M/s. Southern Organo Chemicals (P) Ltd., Nanjangud.	Acetic Acid	
37.	M/s. Kavee Chemical Industries, Bangalore.	Surgical Spirit, Rubbing Sprit Ethyl Acetate and Acetic Acid	
38.	M/s. Ashok Chemo Eyes(P) Ltd., Bangalore.	Ethyl Acetate and Di-Ethyl Phthalate	
39.	M/s. Agro Extraets Ltd. Ltd., Bangalore.	Di-Ethyl Phatlate	
40.	M/s. Mysore Aromatics(P) Ltd., Bangalore.	Perfumery Concentrates	
41.	M/s. Rasol Chemicals (P) Ltd, Kolar taluk.	Ethyl Acetate	
42.	M/s. Khimjibhi Plasticizers & Chemicals, Belgaum.	Ether Solvent	

1	2	3	4
43.	M/s Belgaum Solvents, Belgum	Di-Chloro Acetic Acid and Tri-chloro Acetic Acid	
44.	M/s. S.V.P. Chemicals (P) Ltd, Belgaum.	Di-Ehyl Phahalate.	
45.	M/s Tina Chemicals, Bangalore	Ethyl Acetate	
46.	M/s. Srinivas Chemicals Hubli	Liquid Air Freshner	
47.	M/s. Sugandha Industries, Shimoga	Oleoresins	
48.	M/s. Orient Chem Ind, Raichur	Ethyl Acetate & Di-Ethyl Oazlate	
49.	M/s. Mookambika Chemicals, Mangalore.	Ethyl Acetate	
50.	M/s. Chem Tech Plasticizers & Chemicals, Bangalare.	Di-Ethyl Ether	
51.	M/s. Sunitha Chemicals, Bangalore.	Ethyl Acetate	
52.	M/s. PSS Chemicals (P) Ltd, Bangalore.	Ethyl Acetate	
53.	M/s. Kamal Orgo Chemical Industries Bidar.	Aspirin, Sodium Solicylate and Urea CP.	
54.	M/s. Maruthi Chemical Industries. Bangalore.	Cethaloc Chemicals.	

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಸರಿಯಾದ ಉತ್ತರ ದೊರೆತಿಲ್ಲ. ನಾನು ಪರವಾನಗಿ ಪಡೆದುಕೊಂಡವರ ಹೆಸರಿನ ಪಟ್ಟಿಯನ್ನು ಕೊಡಬೇಕೆಂದು ಕೇಳಿದ್ದೇನೆ. ಕೆಲವು ಅಸೋಸಿಯೇಷನ್‌ಗಳು ಕೈಗಾರಿಕೆಗಳ ಹೆಸರಿನಲ್ಲಿ ಪರವಾನಗಿಯನ್ನು ಪಡೆದುಕೊಂಡಿವೆ, ಯಾರು ಯಾರು ಪರವಾನಗಿ ಪಡೆದುಕೊಂಡಿದ್ದಾರೆಂಬ ಬಗ್ಗೆ ಹೆಸರುಗಳನ್ನು ಹೇಳಬೇಕೆಂದು ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಆರ್. ಸಿ. ಜಿಗಜಿಣಗಿ —ಮಾನ್ಯ ಸದಸ್ಯರು ಕಂಪನಿಗಳ ಹೆಸರು ಕೊಟ್ಟರೆ ಸಂಪೂರ್ಣವಾದ ಮಾಹಿತಿಯನ್ನು ಸದಸ್ಯರಿಗೆ ತಲುಪಿಸಬಹುದು. ಮಾನ್ಯಸದಸ್ಯರು ಹೆಸರುಗಳನ್ನು ಕೇಳುತ್ತಿದ್ದಾರೆ, ಅದು ಇದ್ದರೆ ಒದಗಿಸಿಕೊಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಮಂತ್ರಿಗಳು ನಾನು ವ್ಯಕ್ತಿಗಳ ಹೆಸರನ್ನು ಕೇಳಿದಾಗ ಇದ್ದರೆ ಒದಗಿಸಿ ಕೊಡುತ್ತೇನೆಂದು ಹೇಳಿದ್ದಾರೆ. ಅವರುಗಳ ಹೆಸರುಗಳನ್ನು ಕೊಡುವುದಕ್ಕೆ ಮಂತ್ರಿಗಳು ಹೆದರಿದ್ದಾರೆಂದು ನಾನು ಭಾವಿಸಿಕೊಳ್ಳುತ್ತೇನೆ. ದಯಮಾಡಿ ಆ ಪಟ್ಟಿಯನ್ನು ಕೊಡಿ. ಅದನ್ನು ಕೊಡದಿದ್ದರೆ ನನ್ನ ಪ್ರಶ್ನೆಗೆ ಸರಿಯಾದ ಉತ್ತರ ದೊರತಂತೆ ಆಗುವುದಿಲ್ಲ. ತಾವು ಪಟ್ಟಿಯನ್ನು ಏನು ಕೊಟ್ಟಿದ್ದೀರಿ ಅದಕ್ಕಿಂತಲೂ ಹೆಚ್ಚು ಜನ ಲೈಸೆನ್ಸ್‌ದಾರರು ಕರ್ನಾಟಕ ರಾಜ್ಯದಲ್ಲಿದ್ದಾರೆ. ಸ್ಪಿರಿಟ್ ಅನ್ನು ಪಡೆದು ಖಾಸಗಿ ಎಕ್ಸ್‌ಪೋರ್ಟ್ ಕಂಟ್ರಾಕ್ಟ್‌ರುಗಳಿಗೆ ಕೊಡುವ ಮೂಲಕ ಹೆಚ್ಚಿನ ಹಣವನ್ನು ಪಡೆಯುತ್ತಿದ್ದಾರೆಂದು ನಾನು ಕೇಳಿದ್ದೇನೆ. ಅದೇರೀತಿ ಹುಣಸೂರಿನ ಕೆಮಿಕಲ್ ಫ್ಯಾಕ್ಟರಿಯವರು ಪಡೆಯುತ್ತಿದ್ದಾರೆ. ಆವರ ಹೆಸರನ್ನು ಇಲ್ಲಿ ಹೇಳಿಲ್ಲ. ದಯಮಾಡಿ ಹೆಸರುಗಳ ಪಟ್ಟಿಯನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಸಿ. ಜಿಗಜಿಣಗಿ.—ಮಾನ್ಯ ಸದಸ್ಯರು ಹೆಸರುಗಳ ಪಟ್ಟಿಯನ್ನು ಕೊಡುವುದಕ್ಕೆ ಮಂತ್ರಿಗಳು ಹೇಳಿದ್ದಾರೆಂದು ಹೇಳಿದ್ದಾರೆ : ಅರೋಪಣಾ ಭಾವನೆಯನ್ನು ಮಾಡಿಕೊಳ್ಳಬೇಡಿ. ಅಂತಹ ವ್ಯಕ್ತಿಗಳು ಯಾರೂ ಇಲ್ಲವೆಂದೂ ಸ್ಪಷ್ಟವಾಗಿ ಹೇಳಿಬಿಟ್ಟಿದ್ದೇನೆ. ಮಾನ್ಯ ಸದಸ್ಯರು ಹುಣಸೂರಿನ ವಿಚಾರವನ್ನು ಹೇಳಿದ್ದಾರೆ ಆ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದೇನೆ, ಮಾನ್ಯ ಸದಸ್ಯರ ಹತ್ತಿರ ಯಾವುದಾದರೂ ನಿರ್ದಿಷ್ಟವಾದ ಆರೋಪಗಳು ಇದ್ದರೆ ಆ ಮಾಹಿತಿಯನ್ನು ಕಳುಹಿಸಿ ಕೊಡಲಿ ; ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ :- ಸೊರಬ ಪ್ರಾ. ಏಲ್. ಬಿ. ಬ್ಯಾಂಕ್ ಸುಸ್ತಿ ತನಿಖೆ ವರದಿ ಬಗ್ಗೆ.

ಪ್ರಶ್ನೆ ಸಂಖ್ಯೆ 87 (347) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ [illegible] ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಸೊರಬ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಹಣ ದುರುಪಯೋಗವಾದ ಬಗ್ಗೆ ಗುಪ್ತ ದಳದವರಿಂದ ತನಿಖೆ ಆಗಿದ್ದು ಆಯುಕ್ತರು ಸರ್ಕಾರದವರಿಗೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ ಈ ಬಗ್ಗೆ ತನಿಖೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು) —

(ಅ) ಬಂದಿದೆ ;

(ಆ) ಈ ವರದಿಯು ದಿನಾಂಕ 23-7-85ರಲ್ಲಿ ಬಂದಿದೆ ಪರಿಶೀಲನೆಯ ನಂತರ ಸೂಕ್ತ ಕ್ರಮ ಸಂಬಂಧಪಟ್ಟವರ ಮೇಲೆ ಜರುಗಿಸಲಾಗುವುದು.

ವಿಷಯ :—ಸೊರಬ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಹಣ ದುರುಪಯೋಗ.

ಪ್ರಶ್ನೆ ಸಂಖ್ಯೆ 87 (347) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸೊರಬ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಹಣ ದುರುಪಯೋಗವಾದ ಬಗ್ಗೆ ಗುಪ್ತ ದಳದವರಿಂದ ತನಿಖೆ ಆಗಿದ್ದು ಆಯುಕ್ತರು ಸರ್ಕಾರದವರಿಗೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ಬಗ್ಗೆ ತನಿಖೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು) :—

ಅ) ಬಂದಿದೆ ;

ಆ) ಈ ವರದಿಯು ದಿನಾಂಕ 23-7-85ರಲ್ಲಿ ಬಂದಿದೆ ಪರಿಶೀಲನೆಯ ನಂತರ ಸೂಕ್ತ ಕ್ರಮ ಸಂಬಂಧಪಟ್ಟವರ ಮೇಲೆ ಜರುಗಿಸಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಸೊರಬ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಈಗಿರತಕ್ಕ ದುರ್ಮಾರ್ಗದ ರಾಜ್ಯದಲ್ಲಿ ಬೇರೆಲ್ಲೂ ಆಗಿಲ್ಲ. ತಮ್ಮ ಮಾಹಿತಿ ಪ್ರಕಾರ ಎಷ್ಟು ಹಣ ದುರುಪಯೋಗವಾಗಿದೆ ? ಅಧ್ಯಕ್ಷರು ಎಷ್ಟು ಸೈರೆಕ್ಟರುಗಳ ಆಸ್ತಿಯನ್ನು ಕೋರ್ಟ್ ಅಟಾಚ್‌ಮೆಂಟ್ ಮಾಡಿಕೊಂಡು ಎಷ್ಟು ಜನರಿಂದ ವಸೂಲಿ ಮಾಡಿದ್ದೀರಿ ? ಮಾಜಿ ಡೈರೆಕ್ಟರುಗಳಿಂದ ಬಾಕಿಯನ್ನು ವಸೂಲಿ ಮಾಡುತ್ತಿದ್ದಾರೆ, ಅದಕ್ಕೆ ಹಳೆಯ ರಶೀತಿಗಳನ್ನು ಕೊಡುತ್ತಿದ್ದಾರೆಂದು ನನಗೆ ತಿಳಿದುಬಂದಿದೆ. ಇದು ನಿಜವೇ ?

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸದಸ್ಯರು ಹೇಳತಕ್ಕ ಸೊರಬ ಒಂದೇ ಅಲ್ಲ, ಇಂತಹವು ಎರಡು ಮೂರು ಇವೆ. ಈ ಸಂಸ್ಥೆ ಗುತ್ತಿಗೆಯೇನೂ ಅಲ್ಲ. ನಾನು ರಾಜ್ಯದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷನಾಗಿದ್ದಾಗ ಈ ಸಮಾಚಾರ ತಿಳಿಯಿತು. ತಕ್ಷಣ ನಾನು ಎನ್‌ಕ್ವೈರಿ ಮಾಡಿಯೆಂದು ಹೇಳಿದ್ದೇನೆ. ನಾನು ಪುನಃ ಅಧಿಕಾರಕ್ಕೆ ಬಂದಮೇಲೆ ಸಂಬಂಧಪಟ್ಟ ಫೈಲನ್ನು ತರಿಸಿ ಸಿ.ಒ.ಡಿ.ಗೆ ರೆಫರ್ ಮಾಡಿದನಂತರ ಅವರ ತನಿಖಾ ರಿಪೋರ್ಟ್ ಬಂದಿದೆ. ಬ್ಯಾಂಕಿನ ಕಾರ್ಯದರ್ಶಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿದ್ದೇವೆ. ಉಳಿದ 52 ಜನರ ಮೇಲೆ ಮೊಕದ್ದಮೆ ಹೂಡಲು ತೀರ್ಮಾನ ಮಾಡಿದ್ದೇವೆ. ನಾನು ರಿಪೋರ್ಟ್ ನೋಡಿದ್ದೇನೆ. ಎಷ್ಟು ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬಹುದು ಎಂದು ಯೋಚನೆ ಮಾಡುತ್ತಿದ್ದೇವೆ. ಇದುವರೆಗೆ ಈ ಬ್ಯಾಂಕುಗಳಲ್ಲಿ ಹಣ ದುರುಪಯೋಗವಾದರೆ ನಾನ್ ಆಫೀಶಿಯಲ್‌ಗಳ ಮೇಲೆ ಕ್ರಮ ತೆಗೆದುಕೊಂಡು ಅಧಿಕಾರಿಗಳಿಗೆ ಪ್ರೊಮೋಷನ್ ಕೊಡುವ ವ್ಯವಸ್ಥೆ ಇದೆ. ಆದ್ದರಿಂದ ನಾವು ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಗಳನ್ನು